ಹೋಗುತ್ತದೆ. ಆದುದರಿಂದ ನೀವು ಈ ರೀತಿ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಶಿವರಾಜ್ ಎಸ್. ತಂಗಡಗಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಯಾವ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ, ಇದರ ಬಗ್ಗೆ ನಾನು ನನ್ನ ಅಧಿಕಾರಿಗಳ ಜೊತೆ ಕುಳಿತು ಮಾತನಾಡಿ, ಅದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇನೆ.

ಕಾಡ್ಗಿಚ್ಚಿನಿಂದ ನಾಶವಾಗಿರುವ ಅರಣ್ಯ ಪ್ರದೇಶವನ್ನು ಪುನಃಶ್ಚೇತನಗೊಳಿಸುವುದು

218(4083); ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ)

ಅ) ರಾಜ್ಯದಲ್ಲಿ ಕಾಡ್ಗಿಚ್ಚಿನಿಂದ ಅರಣ್ಯ ಪ್ರದೇಶಗಳಿಗೆ ಬೆಂಕಿ ಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ವರ್ಷ ಬೆಂಕಿಯಿಂದ ಎಷ್ಟು ಅರಣ್ಯ ಪ್ರದೇಶ ನಾಶವಾಗಿದೆ;

ಆ) ಈ ಅರಣ್ಯ ನಾಶವನ್ನು ತಡೆಗಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು; 2013–14ನೇ ಸಾಲಿನಲ್ಲಿ ನಾಗರಹೊಳೆ ಅಭಯಾರಣ್ಯದಲ್ಲಿ ಕಿಡಿಗೇಡಿಗಳು ಬೆಂಕಿ ಹಚ್ಚಿ ಅರಣ್ಯ ನಾಶ ಮಾಡಿರುವ ಘಟನೆ ಬಗ್ಗೆ ಸಿಐಡಿ ತನಿಖೆಯು ಯಾವ ಹಂತದಲ್ಲಿದೆ; ಎಷ್ಟು ಜನ ಆರೋಪಿಗಳನ್ನು ಬಂಧಿಸಲಾಗಿದೆ (ವಿವರಗಳನ್ನು ಒದಗಿಸುವುದು)

ಇ) 2013ನೇ ಸಾಲಿನಲ್ಲಿ ನಾಗರಹೊಳೆ ಅಭಯಾರಣ್ಯದ ಎಷ್ಟು ಪ್ರದೇಶ ನಾಶವಾಗಿದೆ; ಈ ಪ್ರದೇಶದಲ್ಲಿ ಅರಣ್ಯ ಪುನಶ್ಚೇತನಗೊಳಿಸಲು ಏನು ಕ್ರಮ ಕೈಗೊಳ್ಳಲಾಗಿದೆ;

ಈ) ಹಾಗಿದ್ದಲ್ಲಿ, ಅಲ್ಲಿ ಯಾವ ಜಾತಿಯ ಸಸಿಗಳನ್ನು ನೆಡಸಲಾಗಿದೆ; ಇದಕ್ಕಾಗಿ ಈವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ (ವಿವರಗಳನ್ನು ಒದಗಿಸುವುದು)?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು.

ರಾಜ್ಯದಲ್ಲಿ ಈ ವರ್ಷದಲ್ಲಿ ಈವರೆಗೆ 1340.295 ಹೆಕ್ಟೇರ್ ಅರಣ್ಯ ಪ್ರದೇಶಕ್ಕೆ ನೆಲಮಟ್ಟದ ಬೆಂಕಿ ತಗುಲಿರುವುದು ಕಂಡು ಬಂದಿರುತ್ತದೆ.

ಆ) ಬೆಂಕಿಯಿಂದ ಅರಣ್ಯ ನಾಶವನ್ನು ತಡೆಗಟ್ಟಲು ಈ ಕೆಳಕಂಡ ಮುಂಜಾಗೃತ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಭುವನ್ ಅಂತರ್‌ಜಾಲದ ಮೂಲಕ ಪಡೆಯಲಾಗುವ ಮಾಹಿತಿಯನ್ನು ಸಂಬಂಧಿಸಿದ ಅರಣ್ಯಾಧಿಕಾರಿಗಳಿಗೆ ಎಸ್‌ಎಂಎಸ್ ಮೂಲಕ ಮಾಹಿತಿಯನ್ನು ರವಾನಿಸಿ ಬೆಂಕಿಯನ್ನು ನಂದಿಸಲು ಮತ್ತು ಹರಡುವಿಕೆ ತಡೆಯಲು ತುರ್ತು ಕ್ರಮಕೈಗೊಳ್ಳಲಾಗುತ್ತಿದೆ.
2. ಬೆಂಕಿಯನ್ನು ನಂದಿಸಲು ಆಧುನಿಕ ಸಲಕರಣೆಗಳನ್ನು ಬಳಸಲಾಗುತ್ತಿದೆ.
3. ಬೆಂಕಿ ಕಾವಲು ಗೋಪುರಗಳನ್ನು ನಿರ್ಮಿಸಿ, ಕಾವಲುಗಾರರ ಮೂಲಕ ಬೆಂಕಿ ಪ್ರಕರಣಗಳನ್ನು ಪತ್ತೆಹಚ್ಚಲು ಕ್ರಮಕೈಗೊಳ್ಳಲಾಗಿದೆ.
4. ಬೆಂಕಿ ರಕ್ಷಣಾ ಪಡೆಗಳನ್ನು ರಚಿಸಿ ಬೆಂಕಿ ಬಿದ್ದ ಪ್ರದೇಶಗಳನ್ನು ತಲುಪಲು ವಾಹನದ ವ್ಯವಸ್ಥೆ ಮಾಡಲಾಗಿದೆ.
5. ಅರಣ್ಯ ಮತ್ತು ರಸ್ತೆಬದಿಗಳಲ್ಲಿ ಬೆಂಕಿತಡೆ ರೇಖೆಗಳನ್ನು ನಿರ್ಮಿಸಲು/ನಿರ್ವಹಿಸಲು ಕ್ರಮಕೈಗೊಳ್ಳಲಾಗುತ್ತಿದೆ

6. ಅರಣ್ಯ ಪ್ರದೇಶಗಳಲ್ಲಿ ವಿವಿಧ ಅಬಿವೃದ್ಧಿ ಯೋಜನೆಗಳಲ್ಲಿ ಸೂಕ್ತವಾದ ಸ್ಥಳಗಳಲ್ಲಿ ನೀರು ಸಂಗ್ರಹಿಸುವ ಕಾಮಗಾರಿಗಳನ್ನು ಕೈಗೊಂಡು ಮಣ್ಣಿನಲ್ಲಿ ತೇವಾಂಶ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತದೆ.

7. ಅರಣ್ಯ ಪ್ರದೇಶದ ಅಕ್ಕಪಕ್ಕದ ಗ್ರಾಮಸ್ಥರಿಗೆ ಅರಣ್ಯ ಬೆಂಕಿ ತಡೆಯುವ ಬಗ್ಗೆ ಮತ್ತು ಅರಣ್ಯಗಳಿಗೆ ಬೆಂಕಿಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಭಿತ್ತಿಪತ್ರ, ಫಲಕ, ಸಭೆಗಳ ಮೂಲಕ ಅರಿವು ಮೂಡಿಸಲು ಕ್ರಮಕೈಗೊಳ್ಳಲಾಗಿದೆ.

2013–14ನೇ ಸಾಲಿಗೆ ಸಂಬಂಧಿಸಿದಂತೆ, ನಾಗರಹೊಳೆ ಅಭಯಾರಣ್ಯದಲ್ಲಿ ಕಿಡಿಗೇಡಿಗಳು ಬೆಂಕಿ ಹಚ್ಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಒಬ್ಬ ಆರೋಪಿಯನ್ನು ದಸ್ತಗಿರಿಮಾಡಿ, ಪೊನ್ನಂಪೇಟೆ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ. ಪ್ರಕರಣದ ಬಗ್ಗೆ ಸಿ.ಐ.ಡಿ. ತನಿಖೆಯು ಪ್ರಗತಿಯ ಹಂತದಲ್ಲಿರುತ್ತದೆ.

ಇ) 2013–14ನೇ ಸಾಲಿನಲ್ಲಿ ನಾಗರಹೊಳೆ ಅಭಯಾರಣ್ಯದ 198.9 ಹೆಕ್ಟೇರ್ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದು, ಒಣಬಿದಿರು, ಲಂಟಾನ, ಕಳೆಗಳು ಮತ್ತು ಒಣಗಿದ ಹುಲ್ಲು ನಾಶವಾಗಿರುತ್ತದೆ. ಅರಣ್ಯಕ್ಕೆ ಬೆಂಕಿ ಬಿದ್ದು ನಾಶವಾಗಿರುವ ಪ್ರದೇಶದಲ್ಲಿ 15 x 15 ಮೀಟರ್ ಅಳತೆಯ ಸ್ಯಾಂಪಲ್ ಪ್ಲಾಟ್ ಮಾಡಿದ್ದು, ಈ ಪ್ರದೇಶದಲ್ಲಿ ನೈಸರ್ಗಿಕವಾಗಿ ಹುಲ್ಲು ಹಾಗೂ ಮರ ಚಿಗುರಿರುತ್ತದೆ.

ಈ) ಈ ಬೆಂಕಿ ಅನಾಹುತದಿಂದ ಸರ್ಕಾರಕ್ಕೆ ಸಾಮಾನ್ಯವಾಗಿ ಹೆಚ್ಚಿನ ನಷ್ಟ ಆಗಿರುವುದಿಲ್ಲ. ಅರಣ್ಯಗಳು ನವೀಕರಿಸಬಹುದಾದಂತಹ ಸಂಪನ್ಮೂಲಗಳಾಗಿರುತ್ತದೆ. ಇದು ಸಾಮಾನ್ಯವಾಗಿ ಮಳೆಗಾಲದ ನಂತರ ಪುನಶ್ಚೇತನಗೊಳ್ಳುವುದಲ್ಲದೇ ಬೆಂಕಿಬಿದ್ದ ಸ್ಥಳಗಳಲ್ಲಿ 2 ಟನ್ ಬಿದಿರು ಬೀಜ ಪಡೆದು ಬಿತ್ತನೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಸುಮಾರು 1340.295 ಹೆಕ್ಟೇರ್ ಅರಣ್ಯ ನಾಶವಾಗಿದೆಯೆಂದು ಹೇಳಿದ್ದಾರೆ. ಉತ್ತರದಲ್ಲಿ ಕ್ರಮ ಕೈಗೊಂಡಿದ್ದರ ಬಗ್ಗೆ ಹೇಳಿದ್ದಾರೆ. ಉತ್ತರದಲ್ಲಿ 6ನೇ ಅಂಶದಲ್ಲಿ ಅರಣ್ಯ ಪ್ರದೇಶಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಸೂಕ್ತವಾದ ಸ್ಥಳಗಳಲ್ಲಿ ನೀರು ಸಂಗ್ರಹಿಸುವ ಕಾಮಗಾರಿಗಳನ್ನು ಕೈಗೊಂಡು ಮಣ್ಣಿನಲ್ಲಿ ತೇವಾಂಶ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆಯೆಂದು ಹೇಳಿದ್ದಾರೆ. ಅದರ ಬಗ್ಗೆ ಸ್ವಲ್ಪ ವಿವರಗಳನ್ನು ಕೊಡಬೇಕು. ಯಾವ ಅರಣ್ಯದಲ್ಲಿ? ಎಷ್ಟು ಕೆರೆ? ಏನು ಮಾಡಿದ್ದೀರಿ? ಯಾರು ಮಾಡಿದ್ದಾರೆ? ಇದರ ಬಗ್ಗೆ ಸ್ವಲ್ಪ ಮಾಹಿತಿಗಳನ್ನು ಕೊಡಬೇಕು.

ಅಧ್ಯಕ್ಷರು:– ನೀವು ಕೇಳಿರುವ ಪ್ರಶ್ನೆಯಲ್ಲಿ ಅದರ ಬಗ್ಗೆ ಕೇಳಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:– ಕೇಳಿದ್ದೇನಲ್ಲ.

ಅಧ್ಯಕ್ಷರು:– ಎಲ್ಲಿ ಕೇಳಿದ್ದೀರಿ? ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದ್ದೀರಿ. ಕ್ರಮಗಳನ್ನು ವಿವರಿಸಿದ್ದಾರಲ್ಲ?

ಶ್ರೀ ಕೆ.ಜಿ. ಬೋಪಯ್ಯ:– ಬೇರೆ ಬೇರೆ ಇಲಾಖೆಗಳಿಂದ ಎಂದು ಹೇಳಿದ್ದಾರೆ. ಅಲ್ಲಿ ಒಂದು ಕೆರೆಯಿಂದ ತೆಗೆದಿದ್ದರೆ, ನಾಗರಹೊಳೆಗೆ ಅಥವಾ ಉತ್ತರದಲ್ಲಿ ಹೇಳಿದಂತೆ ಮಾಡಿದ್ದರೆ ನಾನು ಒಪ್ಪುತ್ತೇನೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ನಿಮ್ಮ ಹತ್ತಿರ ಆ ವಿವರಗಳು ಈಗ ಇದೆಯೆ?

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ಅರಣ್ಯ ಪ್ರದೇಶದಲ್ಲಿ ಈ ರೀತಿ ಬೆಂಕಿ ಬೀಳತಕ್ಕಂಥದ್ದು ಸಾಮಾನ್ಯವಾಗಿರತಕ್ಕಂಥದ್ದು. ಬಹಳ ವರ್ಷಗಳಿಂದಲೂ ಇದು ನಡೆಯುತ್ತಾ ಬರುತ್ತಿದೆ.

ಶ್ರೀ ಕೆ.ಜಿ. ಬೋಪಯ್ಯ:– ಸಾಮಾನ್ಯವೇನಲ್ಲ, ನಿಮ್ಮ negligence ನಿಂದ. ಬೆಂಕಿ ಬೀಳುವುದು ಸಾಮಾನ್ಯವೆಂದು ಅವರು ಹೇಳುತ್ತಾರಲ್ಲಾ ಅಧ್ಯಕ್ಷರೆ,

ಅಧ್ಯಕ್ಷರು:– ಹೌದು ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ:– ಬೆಂಕಿ ಬೀಳುವುದು ಸಾಮಾನ್ಯವೇ? ಇದು ಸರಿಯಲ್ಲ.

ಅಧ್ಯಕ್ಷರು:– ಆಯಿತು ಬಿಡಿ. ನಾನು ಎಲ್ಲಿಂದ ಬಂದಿರುವುದು ಎಂದು ನೀವು ತಿಳಿದುಕೊಂಡಿದ್ದೀರಿ?

ಶ್ರೀ ಕೆ.ಜಿ. ಬೋಪಯ್ಯ:– ಬೆಂಕಿ ಬೀಳುವುದು ಸಾಮಾನ್ಯವೇ?

ಅಧ್ಯಕ್ಷರು:– ಹೇಗೆ? ಎಂಬುದನ್ನು ತಿಳಿದುಕೊಳ್ಳಿ. ಕಾಡಿನಲ್ಲಿ ಕಟ್ಟಿಗೆ ತರುವುದಕ್ಕೆ ಹೋಗುವವನು ಬೀಡಿ ಸೇದಿ ಬಿಸಾಕಿದಾಗ ಪುಸಕ್ಕೆಂದು ಬೆಂಕಿ ಹತ್ತಿಕೊಳ್ಳುತ್ತದೆ. ಈ ರೀತಿಯೆಲ್ಲಾ ಆಗುತ್ತದೆ. ಅಂಥದ್ದನ್ನು ನಿಲ್ಲಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ರಮಾನಾಥ ರೈ:– ಅದಕ್ಕಾಗಿ ಕಳೆದ ಸಾಲಿನಲ್ಲಿ ನಾವು ಪ್ರಥಮ ಬಾರಿಗೆ ಸಿ.ಐ.ಡಿ. ತನಿಖೆ ಆಗಬೇಕೆಂದು . . . .

ಶ್ರೀ ಕೆ.ಜಿ. ಬೋಪಯ್ಯ:– ನಾಗರಹೊಳೆ ಅಭಯಾರಣ್ಯಕ್ಕೆ ಸಂಬಂಧಪಟ್ಟಂತೆ tiger reserve ಏನಿದೆ ಅದರಲ್ಲಿ ರಕ್ಷಣೆ ಏನಿದೆ ಎಂಬ ಬಗ್ಗೆ ಹೇಳಿ. ಎಲ್ಲಾ ಫಾರೆಸ್ಟ್‌ಗಳ ಬಗ್ಗೆ ನಾನು ಕೇಳಿಲ್ಲ.

ಅಧ್ಯಕ್ಷರು:– ಮಾನ್ಯ ಸಚಿವರೆ, ಹೇಳಿ.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ನಾನು ಕೂಡ ಕಾಡು ಪ್ರದೇಶದಿಂದ ಬಂದಿರುವವನು. ನನ್ನ ಕಡೆಯಲ್ಲಿಯೂ ಕೂಡ ಹಾಗೆಯೇ ಇದೆ. ಮಾನ್ಯ ಸಭಾಧ್ಯಕ್ಷರು ಹೇಳಿದ ಪ್ರಕಾರ ಅಂಥ ಘಟನೆಗಳು ನಡೆಯುವುದು ಉಂಟು. ನಾವು ಕಳೆದ ಸಾರಿ ವಿಶೇಷವಾಗಿ ಒಂದು ಸಿ.ಐ.ಡಿ. ತನಿಖೆಯನ್ನು ಮಾಡಬೇಕೆಂದು ಹೇಳಿದ್ದೇವೆ. ಆ ತನಿಖೆ ಪ್ರಗತಿಯಲ್ಲಿದೆ. ಈಗಾಗಲೇ ಒಬ್ಬನನ್ನು ದಸ್ತಗಿರಿ ಮಡುವಂಥ ಕೆಲಸವನ್ನು ಮಾಡಿದ್ದೇವೆ. ಇದರ ಜೊತೆಗೆ ಪ್ರತಿ ವರ್ಷ ಏನೇನು ಕ್ರಮ ಕೈಗೊಳ್ಳಲಾಗುತ್ತದೆ? ಎಂಬ ಬಗ್ಗೆ

ವಿವರವಾಗಿ ಉತ್ತರ ಕೊಟ್ಟಿದ್ದೇನೆ. ಹೇಗೆ ಮತ್ತು ಯಾವ ರೀತಿಯಲ್ಲಿ ನಿಯಂತ್ರಣ ಮಾಡುತ್ತೇವೆ, ಬೆಂಕಿ ರೇಖೆಯನ್ನು ರಚನೆ ಮಾಡತಕ್ಕಂಥದ್ದು, ಕಾವಲುಗಾರರು, ಗೋಪುರವನ್ನು ನಿರ್ಮಿಸಿ ಅಲ್ಲಿ ಕಾವಲುಗಾರರನ್ನು ಇಟ್ಟಿರತಕ್ಕಂಥದ್ದು, ಹೀಗೆ ಬೇರೆ ಬೇರೆ ವಿಚಾರಗಳಲ್ಲಿ ನಾವು ಕೆಲಸ ಮಾಡಿದ್ದೇವೆ. ಬೀಜಗಳನ್ನು ಹಾಕಿರತಕ್ಕಂಥದ್ದು, ಸಸಿಗಳನ್ನು ನೆಟ್ಟಿರತಕ್ಕಂಥದ್ದು, ಹೀಗೆ ಪ್ರತಿ ವರ್ಷ ಆಗತಕ್ಕಂಥ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಕೆಲವು ಸಂದರ್ಭದಲ್ಲಿ ಬೆಂಕಿ ಆಕಸ್ಮಿಕವಾಗಿ ಬೀಳುತ್ತದೆ, ಆದರೆ ಬೆಂಕಿ ಉದ್ದೇಶಪೂರ್ವಕವಾಗಿಯೇ ಬೀಳಿಸಲಾಗಿದೆ ಎಂದಿರುವುದಕ್ಕೆ ಸಂಬಂಧಪಟ್ಟಂತೆ ನಾವು ಸಿ.ಐ.ಡಿ. ತನಿಖೆಯನ್ನು ನಾಗರಹೊಳೆಗೆ ಸಂಬಂಧಪಟ್ಟಂತೆ ಮಾಡಲು ವಹಿಸಿದ್ದೇವೆ. ಈ ರೀತಿಯ ಕ್ರಮಗಳನ್ನು ನಾವು ಕೈಗೊಳ್ಳುತ್ತಿದ್ದೇವೆ. ಬೆಂಕಿ ಬಿದ್ದಿರುವ ಪ್ರಕರಣವನ್ನು ಬಹಳ ಗಂಭೀರವಾಗಿಯೇ ಪರಿಗಣಿಸುತ್ತಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ:– ಸಿ.ಐ.ಡಿ. ತನಿಖೆಗೆ ವಹಿಸಿ ಕಾಡಿನಲ್ಲಿ ವಾಸ ಮಾಡುವವರಲ್ಲಿ ಒಬ್ಬನನ್ನು ಈಗಾಗಲೇ ದಸ್ತಗಿರಿ ಮಾಡಿ ಒಳಗೆ ಹಾಕಿದ್ದಾರೆ. ಸಿ.ಐ.ಡಿ. ತನಿಖೆಯಾಗಿ ಈಗಾಗಲೇ ಎರಡು ವರ್ಷಗಳಾಯಿತು, ಇನ್ನೂ ಯಾರನ್ನೂ,,

ಶ್ರೀ ಬಿ. ರಮಾನಾಥ ರೈ:– ಕಳೆದ ವರ್ಷ.

ಶ್ರೀ ಕೆ.ಜಿ. ಬೋಪಯ್ಯ:– ಕಳೆದ ವರ್ಷವಲ್ಲ, ಅದರ ಹಿಂದಿನ ವರ್ಷ.

ಅಧ್ಯಕ್ಷರು:– ಆಯಿತು, ಈಗ ಏನು ಮಾಡಬೇಕು ಎಂಬುದನ್ನು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಅದರಲ್ಲಿ ಏನೂ ಮಾಡಿಲ್ಲ. ಕಣ್ಣು ಕಟ್ಟೋ ಕೆಲಸ ಮಾಡಿದ್ದಾರೆ. ಅದು ಇರಲಿ. ನಾಗರಹೊಳೆ ಅರಣ್ಯದಲ್ಲಿ 198.9 ಹೆಕ್ಟೇರ್ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದು ಒಣಬಿದಿರು, ಲಂಟಾನ ಕಳೆಗಳು ಮತ್ತು ಒಣಗಿದ ಹುಲ್ಲು ನಾಶವಾಗಿರುತ್ತದೆ. ಅರಣ್ಯಕ್ಕೆ ಬೆಂಕಿ ಬಿದ್ದು ನಾಶವಾಗಿರುವ

ಪ್ರದೇಶದಲ್ಲಿ 15 x 15 ಮೀಟರ್ ಅಳತೆಯ ಸ್ಯಾಂಪಲ್ ಪ್ಲಾಟ್ ಮಾಡಿದ್ದು, ಈ ಪ್ರದೇಶದಲ್ಲಿ ನೈಸರ್ಗಿಕವಾಗಿ ಹುಲ್ಲು ಹಾಗೂ ಮರ ಚಿಗುರಿರುತ್ತದೆ ಎಂದು ಹೇಳಿದ್ದಾರೆ. ನಾನು ಈ ಬಗ್ಗೆ ಸದನ ಸಮಿತಿಯನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಒಂದು ಮರ ಅಲ್ಲಿ ಬೆಳೆದಿದ್ದರೆ ಅಥವಾ ಇವರು ಹೇಳಿದ ಹಾಗೆ ಹುಲ್ಲು ಬೆಳೆದಿದ್ದರೆ ಕೇಳಿ. ಅಲ್ಲಿ ಹುಲ್ಲು ಬೆಳೆದಿಲ್ಲ, ಅಲ್ಲಿ ಗಾಂಧಿ ಗುಲಾಬಿ ಬೆಳೆದಿದೆ, ಅಲ್ಲಿ ಹುಲ್ಲು ಬೆಳೆಯುವ ಪರಿಸ್ಥಿತಿ ಇಲ್ಲ. ಇವರು ಸುಮ್ಮನೆ ಅಧಿಕಾರಿಗಳು ಕೊಟ್ಟಿದ್ದನ್ನು ಉತ್ತರದಲ್ಲಿ ಹೇಳಿದ್ದಾರೆ. ಅಧಿಕಾರಿಗಳು ಕೊಟ್ಟಿದ್ದನ್ನೇ ದಯವಿಟ್ಟು ಹೇಳಬೇಡಿ. ಆಮೇಲೆ, , ,

ಅಧ್ಯಕ್ಷರು:– ಬೋಪಯ್ಯನವರೆ, ನೀವು ಒಂದು ಕೆಲಸ ಮಾಡಿ, ಅರಣ್ಯ ಇಲಾಖೆ ಮೇಲೆ ಚರ್ಚೆ ನಡೆಯುತ್ತದಲ್ಲ, ಆಗ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ.

ಶ್ರೀ ಕೆ.ಜಿ. ಬೋಪಯ್ಯ:– ಅದು ಸರಿ. ಆದರೆ ನಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಈ ರೀತಿ ಉತ್ತರ ಕೊಟ್ಟರೆ ಹೇಗೆ?

ಅಧ್ಯಕ್ಷರು:– ನೀವು ಕೇಳಿರುವ ಪ್ರಶ್ನೆಗೆ ಸೀಮಿತವಾಗಿ ಉತ್ತರವನ್ನು ಕೊಟ್ಟಿದ್ದಾರಪ್ಪಾ. ನೀವು ಏನು ಕೇಳಿದ್ದೀರಿ ಗೊತ್ತಾ? ನೀವು ಪ್ರಶ್ನೆಯಲ್ಲಿ ಕೇಳಿರುವುದೇ ಬೇರೆ, ಏನೆಂದರೆ 2013–14ನೇ ಸಾಲಿನಲ್ಲಿ ನಾಗರಹೊಳೆ ಅಭಯಾರಣ್ಯದಲ್ಲಿ ಕಿಡಿಗೇಡಿಗಳು ಬೆಂಕಿ ಹಚ್ಚಿ ಅರಣ್ಯ ನಾಶ ಮಾಡಿರುವ ಘಟನೆ ಬಗ್ಗೆ ಸಿ.ಐ.ಡಿ. ತನಿಖೆ ಯಾವ ಹಂತದಲ್ಲಿದೆ? ಎಂದು ಕೇಳಿದ್ದೀರಿ. ವಾಸ್ತವಿಕವಾಗಿ ಇದನ್ನೆಲ್ಲಾ ಹೇಳಲೇಬಾರದಿತ್ತು. ಯಾವ ಹಂತದಲ್ಲಿದೆ? ಎನ್ನುವುದನ್ನಷ್ಟೇ ಹೇಳಿದ್ದರೆ ಸಾಕಾಗಿರುತ್ತಿತ್ತು.

ಶ್ರೀ ಬಿ. ರಮಾನಾಥ ರೈ:– ಮಾನ್ಯ ಅಧ್ಯಕ್ಷರೆ, ನಾವು ಬಂದಮೇಲೆ ಸಾಕಷ್ಟು ನಿಯಂತ್ರಣ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಇದೊಂದು ವಿಚಾರ, ಅಲ್ಲಿ ಬೀಜ ನೆಡುವುದರ ಬಗ್ಗೆ ಹೇಳಬೇಕು.

ಅಧ್ಯಕ್ಷರು:– ಅವರು ಕೇಳಿಲ್ಲ, ಇವರು ಹೇಳಿಲ್ಲ ಬಿಡಿ.

ಶ್ರೀ ಕೆ.ಜಿ. ಬೋಪಯ್ಯ:– ಬೀಜ ಸಂಗ್ರಹಣೆ ಮಾಡಿದ್ದಾರೆಂದರೆ ಅದಕ್ಕೆ ಅರ್ಥ ಏನು?

ಅಧ್ಯಕ್ಷರು:– ನೀವು ಕೇಳಿಲ್ಲ ಮಾರಾಯಾ. ನೀವು ಆ ವಿಷಯವೇ ಕೇಳಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:– ಇಲ್ಲ, ಕೇಳಿದ್ದೇನಲ್ಲ.

ಅಧ್ಯಕ್ಷರು:– ಎಲ್ಲಿ ಕೇಳಿದ್ದೀರಿ?

ಶ್ರೀ ಕೆ.ಜಿ. ಬೋಪಯ್ಯ:– (ಈ) ಪ್ರಶ್ನೆಯಲ್ಲಿ ಹಾಗಿದ್ದಲ್ಲಿ, ಯಾವ ಜಾತಿಯ ಸಸಿಗಳನ್ನು ನೆಡಲಾಗಿದೆ. ಇದಕ್ಕಾಗಿ ಈವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ (ವಿವರಗಳನ್ನು ಒದಗಿಸುವುದು) ಎಂದು ಕೇಳಿರುವ ಪ್ರಶ್ನೆಗೆ ಏನು ಹೇಳಿದ್ದಾರೆಂದರೆ, ಬೆಂಕಿ ಅನಾಹುತದಿಂದ ಸಾಮಾನ್ಯವಾಗಿ ಹೆಚ್ಚಿನ ನಷ್ಟವಾಗಿರುವುದಿಲ್ಲ ಎಂದು ಹೇಳಿದ್ದಾರೆ. ಇವರ ಪ್ರಕಾರ ನಷ್ಟ ಆಗಿಯೇ ಇಲ್ಲ. 'ಅರಣ್ಯಗಳು ನವೀಕರಿಸಬಹುದಾದ ಸಂಪನ್ಮೂಲಗಳಾಗಿರುತ್ತದೆ. ಇದು ಸಾಮಾನ್ಯವಾಗಿ ಮಳೆಗಾಲದ ನಂತರ ಪುನಶ್ಚೇತನಗೊಳ್ಳುವುದಲ್ಲದೆ ಬೆಂಕಿ ಬಿದ್ದ ಸ್ಥಳಗಳಲ್ಲಿ ಎರಡು ಟನ್ ಬಿದಿರು ಬೀಜ ಪಡೆದು ಬಿತ್ತನೆ ಮಾಡಲು ಕ್ರಮ ಕೈಗೊಳ್ಳಲಾಗಿದೆ' ಎಂದು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ? ಕಳೆದ ವರ್ಷ ಎಂದರೆ 2013ನೇ ಸಾಲಿನಲ್ಲಿ ಆಗಿರುವುದಕ್ಕೆ ಈಗ ಎರಡು ಟನ್ ಬೀಜ ಎಂದು ಹೇಳಿದ್ದಾರೆ. ಆದರೆ ಕೆಡಿಪಿ ಮೀಟಿಂಗ್‌ನಲ್ಲಿ 7 ಟನ್ ಎಂದು ಹೇಳಿದ್ದಾರೆ. ನೀವು ಪುನಶ್ಚೇತನಗೊಳಿಸುವುದಕ್ಕೆ ಎಷ್ಟು ಖರ್ಚು ಮಾಡಿದ್ದೀರೆಂದು ಸ್ಪಷ್ಟವಾಗಿ ಹೇಳಿ.

ಅಧ್ಯಕ್ಷರು:– ನಿಮ್ಮ ಹತ್ತಿರ ಉತ್ತರ ಇದ್ದರೆ ಹೇಳಿ, ಇಲ್ಲದಿದ್ದರೆ ಆಮೇಲೆ ಉತ್ತರ ಕೊಡುತ್ತೇನೆಂದು ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:– ಇದು ಸುಮ್ಮನೆ ಅಧಿಕಾರಿಗಳು . . .

ಅಧ್ಯಕ್ಷರು:– ಆಯಿತು, ಮುಕ್ತಾಯವಾಯಿತು, ಬಿಡಿ. ಈಗ ಹಾಲಾಡಿ ಶ್ರೀನಿವಾಸ ಶೆಟ್ಟಿಯವರು ಹೇಳಿ.

ಶ್ರೀ ಬಿ. ರಮಾನಾಥ ರೈ:– ಇವರ ಸರ್ಕಾರ ಇದ್ದಾಗ ಕೂಡ ಏನು ಮಾಡಿದ್ದಾರೆ? ಸುಮ್ಮನೆ ಮಾತನಾಡಬೇಕು ಎಂದು ಮಾತನಾಡುವುದಲ್ಲ. ಇದರಲ್ಲಿ ಏನಿದೆ?

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಅಲ್ಲಿ ಜೆ.ಸಿ. ಸಂಸ್ಥೆಯವರು ಹೋಗಿ ಬೀಜ ಬಿತ್ತನೆ ಮಾಡಿದರೆ, ಅವರ ಮೇಲೆ ಕೇಸ್ ಹಾಕಿದ್ದಾರೆ. ಜನರಿಗೂ ಕೂಡ ಅರಣ್ಯ ಬೆಳೆಸುವುದಕ್ಕೆ ಇವರು ಬಿಡುವುದಿಲ್ಲ. ಇವರೂ ಮಾಡುವುದಿಲ್ಲ.

ಅಧ್ಯಕ್ಷರು:– ಇದರ ಬಗ್ಗೆ ಚರ್ಚೆ ಮಾಡಿ. ಅದಕ್ಕೆ ಶೀಘ್ರವಾಗಿ ಉತ್ತರ ಕೊಡುತ್ತಾರೆ.

ಶ್ರೀ ಕೆ.ಜಿ. ಬೋಪಯ್ಯ:– ನಮ್ಮ ಕಾಲದಲ್ಲಿ ಪರವಾಗಿಲ್ಲ, ನೀವು ಬಂದ ಮೇಲೆ ಅರಣ್ಯ ನಾಶವಾಗಿದ್ದು.

(ಗೊಂದಲ)

ಅಧ್ಯಕ್ಷರು:– ಸಾಕು ಬಿಡಿ. ಶ್ರೀನಿವಾಸ ಶೆಟ್ಟಿಯವರು ಇಲ್ಲ.

ಚಿಮ್ಮಲಗಿ ಏತ ನೀರಾವರಿ ಯೋಜನೆಯ ಕಾಮಗಾರಿ

220(4079); ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ಸಿಂದಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಚಿಮ್ಮಲಗಿ ಏತ ನೀರಾವರಿ ಯೋಜನೆಯಡಿಯಲ್ಲಿ ನೀರಾವರಿಗೊಳಪಡುವ ಗ್ರಾಮಗಳು ಯಾವುವು (ಸಿಂದಗಿ ತಾಲ್ಲೂಕಿನಲ್ಲಿ ನೀರಾವರಿಗೊಳಪಡುವ ಪ್ರತಿ ಗ್ರಾಮಗಳ ವಿವರ ನೀಡುವುದು);